ಓ.ಎಸ್ ನಂ. 37/2016 ಡಿ.ಡಬ್ಲೂಃ 1

ದಿನಾಂಕಃ 18.08.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು

ಪಾಟೀಸವಾಲು ಶ್ರೀ. ಆರ್.ಡಿ.ಆರ್. ವಕೀಲರಿಂದ

ನನ್ನ ತಾತನ ಹೆಸರು ಚನ್ನಪಾಜಯ್ಯ ಎಂದರೆ ಹೌದು. ಚನ್ನಪಾಜಯ್ಯನಿಗೆ 4 ಜನ ಮಕ್ಕಳು ಅವರೆಂದರೆ ದೇವಿರಮ್ಮ, ಚನ್ನಾಜಮ್ಮ, ಭುಜಂಗಸ್ವಾಮಿ, ಮೋಹನ. ಚನ್ನಪಾಜಯ್ಯ ಮೃತಪಟ್ಟು 50 ವರ್ಷವಾಗಿರುತ್ತದೆ ದಿನಾಂಕ ಗೊತ್ತಿಲ್ಲ. ದೇವಿರಮ್ಮ ಮೃತಪಟ್ಟಿರುತ್ತಾರೆ. ಸದರಿಯವರು 2012 ರಲ್ಲಿ ಮೃತಪಟ್ಟಿರುತ್ತಾರೆ. ದೇವಿರಮ್ಮನವರಿಗೆ ಮಕ್ಕಳು ಇರುತ್ತಾರೆ ಅವರೆಂದರೆ ಸುಂದರಮ್ಮ, ಪುಟ್ಟಮಣಿ, ಹಾಗೂ ಚಂದ್ರಪ್ಪ. ಚಂದ್ರಪ್ಪ ಜೀವಂತ ಇದ್ದಾರೆ. ಚನ್ನಾಜಮ್ಮ 2001 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆಯವರು 2007 ರಲ್ಲಿ ಮೃತಪಟ್ಟಿರುತ್ತಾರೆ. ನಮ್ಮ ತಂದೆಗೆ 4 ಜನ ಮಕ್ಕಳು, ಅವರೆಂದರೆ ಲತಾಮಣಿ, ತ್ರಿವೇಣಿ, ಶಿವಕುಮಾರ ಹಾಗೂ ನಾನು. ಲತಾಮಣಿ ಮೃತಪಟ್ಟಿರುತ್ತಾರೆ. ಅವರ ಮಗನ ಹೆಸರು ದರ್ಶನ್ ಸದರಿಯವರು ಒಬ್ಬನೇ ಮಗನಾಗಿರುತ್ತಾರೆ. ಲತಾಮಣಿ ರವರ ಗಂಡನ ಹೆಸರು ಪ್ರಕಾಶ. ವಾದ ಪತ್ರದಲ್ಲಿ ನಮೂದಿಸಿರುವಂತ ಎ ಅನುಸೂಚಿ ಸ್ವತ್ತುಗಳ ಸರ್ವೆ ನಂಬರ್ ನನಗೆ ಗೊತ್ತಿರುತ್ತದೆ. ಸಾಕ್ಷಿಗೆ ಈ ಹಂತದಲ್ಲಿ ದಾವಾ ಎ ಅನುಸೂಚಿ ಸ್ವತ್ತುಗಳ ಎಲ್ಲಾ ಸರ್ವೆ ನಂಬರ್ ಹಾಗೂ ವಿಸ್ತೀರ್ಣವನ್ನು ಓದಿ ಹೇಳಲಾಗಿ ಸಾಕ್ಷಿಯು ಕೆಲವು ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿದ್ದು, ಇನ್ನು ಕೆಲವು ಆಸ್ತಿಗಳು ಭುಜಂಗಸ್ವಾಮಿ ರವರ ಸ್ವಯಾರ್ಜಿತ ಆಸ್ತಿಗಳು ಎಂದು ಉತ್ತರಿಸುತ್ತಾರೆ. ನನ್ನ ತಕರಾರಿನಲ್ಲಿ ದಾವಾ ಅನುಸೂಚಿ ಎ ಆಸ್ತಿಗಳಲ್ಲಿ ಕೆಲವು ಆಸ್ತಿಗಳು

ಪಿತ್ರಾರ್ಜಿತ ಆಸ್ತಿಗಳಾಗಿದ್ದು ಇನ್ನು ಕೆಲವು ಭುಜಂಗಸ್ವಾಮಿ ರವರ ಸ್ವಯಾರ್ಜಿತ ಆಸ್ತಿಗಳೆಂದು ನಾನು ಹೇಳಿ ಬರೆಸಿರುತ್ತೇನೆ. ನನ್ನ ಚಿಕ್ಕಪ್ಪ ಮೋಹನ ಮೃತಪಟ್ಟಿರುತ್ತಾರೆ. ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು. ನನ್ನ ಚಿಕ್ಕಪ್ಪ ಮೋಹನ ಶಿಕ್ಷಕರಾಗಿದ್ದರು. ನನ್ನ ಚಿಕ್ಕಪ್ಪ ಯಾವ ಸಾಲಿನಲ್ಲಿ ಕೆಲಸಕ್ಕೆ ಸೇರಿರುತ್ತಾರೆಂದು ನನಗೆ ಗೊತ್ತಿಲ್ಲ. ಚನ್ನಪಾಜಯ್ಯನಿಗೆ ಪಿತ್ರಾರ್ಜಿತವಾಗಿ 6 ರಿಂದ 7 ಎಕರೆ ಖುಷ್ಕಿ ಮತ್ತು ತರಿ ಜಮೀನು ಇತ್ತು. ಸದರಿ ಜಮೀನುಗಳನ್ನು ನನ್ನ ತಂದೆ ಅಬಾದು ಮಾಡುತ್ತಿದ್ದರು. ಕುಟುಂಬದ ವ್ಯವಹಾರವನ್ನು ನನ್ನ ತಂದೆಯವರೇ ಮಾಡುತ್ತಿದ್ದರು ಎಂದರೆ ಹೌದು. ಜಮೀನಿನಿಂದ ಬಂದಂತಹ ಆದಾಯವನ್ನು ನನ್ನ ತಂದೆಯವರೇ ನಿರ್ವಹಣೆ ಮಾಡುತ್ತಿದ್ದರು ಎಂದರೆ ಹೌದು. ಜಮೀನಿನಿಂದ ಬಂದಂತಹ ಆದಾಯವನ್ನು ನನ್ನ ಚಿಕ್ಕಪ್ಪ ಮೋಹನ ರವರಿಗೆ ಕೊಡುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪ ಮೃತ ಪಡುವ ವರೆಗೂ ಅನ್ಯೋನ್ಯವಾಗಿ ಇದ್ದರು ಎಂದರೆ ಹೌದು. ಅವರ ನಡುವೆ ಯಾವುದೇ ವೈಮನಸ್ಸು ಇರಲಿಲ್ಲ ಎಂದರೆ ಸಾಕ್ಷಿಯು ಇದ್ದ ಹಾಗೆ ಕಾಣಲಿಲ್ಲ ಎಂದು ಉತ್ತರಿಸುತ್ತಾರೆ.

ದಿನಾಂಕ : 19.05.1955 ರಂದು ಚನ್ನಪಾಜಯ್ಯ ರವರು ಸ.ನಂ. 82 ರಲ್ಲಿ 16 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಹೌದು. ದಿನಾಂಕ : 29.05.2001 ರಂದು 83/4 ರಲ್ಲಿ 16 ಗುಂಟೆ ಜಮೀನನ್ನು ನನ್ನ ತಂದೆ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಹೌದು. ದಿನಾಂಕ : 06.04.1947 ರಂದು 101/8 ರಲ್ಲಿ 6 ಗುಂಟೆ ಜಮೀನನ್ನು ಚನ್ನಪಾಜಯ್ಯನವರ ಹೆಸರಿನಲ್ಲಿ ಖರೀದಿ ಮಾಡಲಾಗಿರುತ್ತದೆ ಎಂದರೆ ಹೌದು. ದಿನಾಂಕ : 22.09.1957 ರಂದು ಸ.ನಂ. 102/3 ರಲ್ಲಿ 1 ಎಕರೆ 4 ಗುಂಟೆ ಜಮೀನನ್ನು ಖರೀದಿ ಮಾಡಲಾಗಿರುತ್ತದೆ ಎಂದರೆ ಹೌದು. ಸ.ನಂ. 106/16 ರಲ್ಲಿ 1 ಎಕರೆ ಜಮೀನನ್ನು ದಿನಾಂಕ :

28.03.1973, 05.06.1975, ಹಾಗೂ 17.11.1976 ರ ಕ್ರಯಪತ್ರಗಳ ಅಡಿಯಲ್ಲಿ ಖರೀದಿ ಮಾಡಲಾಗಿರುತ್ತದೆ ಎಂದರೆ ಹೌದು . ಸ.ನಂ. 112/3 ರಲ್ಲಿ 1 ಎಕರೆ 6 ಗುಂಟೆ , 112/7 ರಲ್ಲಿ 3 ಎಕರೆ ಸ್ವತ್ತನ್ನು ದಿನಾಂಕ : 31.03.1974 ರ ಕ್ರಯಪತ್ರದ ಅಡಿಯಲ್ಲಿ ಖರೀದಿ ಮಾಡಲಾಗಿರುತ್ತದೆ ಎಂದರೆ ಹೌದು. ಸ.ನಂ. 136/1 ಬಿ ಆಸ್ತಿಯನ್ನು ನನ್ನ ಅಜ್ಜಿ ಪಾರ್ವತಮ್ಮನವರ ಹೆಸರಿನಲ್ಲಿ ಖರೀದಿ ಮಾಡಲಾಗಿದೆ ಎಂದರೆ ಹೌದು. ದಿನಾಂಕ : 21.04.1961 ರಂದು 158/3 ರಲ್ಲಿ 29 ಗುಂಟೆ ಆಸ್ತಿಯನ್ನು ಖರೀದಿ ಮಾಡಲಾಗಿದೆ ಎಂದರೆ ಹೌದು. ದಿನಾಂಕ : 21.09.1982 ರಂದು ಹಳ್ಳಿಮೈಸೂರಿನ ಮನೆಯನ್ನು ಖರೀದಿ ಮಾಡಲಾಗಿದೆ ಎಂದರೆ ಹೌದು.

ಮೇಲೆ ಹೇಳಿದಂತಹ ಕ್ರಯಪತ್ರಗಳು ಆದಾಗ ನಾನು ಖುದ್ದು ಹಾಜರಿರಲಿಲ್ಲ ಎಂದರೆ ಹೌದು. ಕ್ರಯದ ಮಾತುಕತೆಯಾದಾಗ ನಾನು ಖುದ್ದು ಇರಲಿಲ್ಲ ಎಂದರೆ ಹೌದು. . ಕ್ರಯದ ಪ್ರತಿಫಲವನ್ನು ಯಾರು ಯಾವಾಗ ಎಲ್ಲಿ ಖುದ್ದಾಗಿ ಪಾವತಿ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ ಎಂದರೆ ಹೌದು. ನನ್ನ ತಂದೆಯವರಿಗೆ ವ್ಯವಸಾಯ ಬಿಟ್ಟು ಬೇರೆ ಉದ್ಯೋಗ ಗೊತ್ತಿರಲಿಲ್ಲ ಎಂದರೆ ಸಾಕ್ಷಿಯು ಸೊಸೈಟಿ ನಡೆಸುತ್ತಿದ್ದರು ಎಂದು ಉತ್ತರಿಸುತ್ತಾರೆ. ನನ್ನ ತಂದೆಯವರು ರೇಷನ್ ಸೊಸೈಟಿಯನ್ನು ನಡೆಸುತ್ತಿದ್ದರು. ನನ್ನ ತಂದೆಯವರು 1980 ನೇ ಸಾಲಿನಿಂದ ರೇಷನ್ ಸೊಸೈಟಿ ನಡೆಸುತ್ತಿದ್ದರು, ದಾಖಲಾತಿ ಇರುವುದಿಲ್ಲ. ನನ್ನ ತಂದೆಯವರಿಗೆ ಸೊಸೈಟಿಯಿಂದ ಕಮಿಷನ್ ಸಿಕ್ಕುತ್ತಿತ್ತು. ಎಷ್ಟು ಕಮಿಷನ್ ಬರುತ್ತಿತ್ತು ಹಾಗೂ ಅದರ ಬಗ್ಗೆ ದಾಖಲಾತಿ ಇರುವುದಿಲ್ಲ. ನನ್ನ ತಂದೆಯವರು ಯಾವುದೇ ಸೊಸೈಟಿ ನಡೆಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿಯಾಗಿ ನನ್ನ ತಂದೆಯವರಿಗೆ ವ್ಯವಸಾಯ ಬಿಟ್ಟು ಬೇರೆ ಉದ್ಯೋಗ

ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಆದಂತಹ ಹಿಸ್ಸೆಯಂತೆ ಲತಾಮಣಿ ರವರಿಗೂ ಸಹಾ ಹಿಸ್ಸೆ ನೀಡಲಾಗಿರುತ್ತದೆ ಎಂದರೆ ನೀಡಿರಬಹುದು ಆದರೆ ನನಗೆ ಗೊತ್ತಿಲ್ಲ. ಲತಾಮಣಿ ರವರಿಗೆ ಸ.ನಂ. 105/1 ಎ ನಲ್ಲಿ 1 ಎಕರೆ , ಸ.ನಂ. 92 ರಲ್ಲಿ 1 ಎಕರೆ 1 ಗುಂಟೆ, ಸ.ನಂ. 97/1 ಎ ನಲ್ಲಿ 7 ಗುಂಟೆ, 112/3 ರಲ್ಲಿ 1 ಎಕರೆ 6 ಗುಂಟೆ, 136/1 ಬಿ ನಲ್ಲಿ 1 ಎಕರೆ 4 ಗುಂಟೆ ಜಮೀನು ಹಿಸ್ಸೆಯಾಗಿ ನೀಡಲಾಗಿರುತ್ತದೆ ಎಂದರೆ ಸಾಕ್ಷಿಯು ನೀಡಿರಬಹುದು ಆದರೆ ನಾನು ಇರಲಿಲ್ಲ ಎಂದು ಉತ್ತರಿಸುತ್ತಾರೆ. ಮೇಲೆ ಹೇಳಿದಂತಹ ಸ್ವತ್ತಿನ ಖಾತೆಗಳು ಲತಾಮಣಿ ರವರ ಜೀವಿತ ಕಾಲದಲ್ಲಿ ಅವರ ಹೆಸರಿನಲ್ಲಿ ಇದ್ದು, ಅವರು ಮೃತಪಟ್ಟ ನಂತರ ಅವರ ಮಗನಾದ ದರ್ಶನ್ ರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ಉತ್ತರಿಸುತ್ತಾರೆ.

ಈ ಪ್ರಕರಣದಲ್ಲಿ ಹಾಜರುಪಡಿಸಿರುವ ಪಹಣಿ ಪತ್ರಿಕೆಗಳನ್ನು ನಾನು ನೋಡಿರುತ್ತೇನೆ. ಈ ಪ್ರಕರಣದಲ್ಲಿ ಇರುವಂತಹ ಸ.ನಂ.ಗೆ ಸಂಬಂಧಿಸಿದಂತೆ ಪಹಣಿ ಪತ್ರಿಕೆಗಳನ್ನು ನಾನು ನೋಡಿರುತ್ತೇನೆ. ಲತಾಮಣಿ ರವರಿಗೆ ಮೇಲೆ ಹೇಳಿದಂತಹ ಸ್ವತ್ತಿನ ಖಾತೆಗಳು ಎಂ.ಆರ್. 3/1998-99 ರಂತೆ ಖಾತೆಯಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ಅತ್ತೆ ದೇವಿರಮ್ಮನಿಗೆ ಸ.ನಂ. 158/3 ರಲ್ಲಿ 29 ಗುಂಟೆ, ಹಿಸ್ಸೆ ನೀಡಲಾಗಿದೆ ಎಂದರೆ ಸಾಕ್ಷಿಯು ಕೊಟ್ಟಿರಬಹುದು ಎಂದು ಉತ್ತರಿಸುತ್ತಾರೆ. ದೇವರಿಮ್ಮ ರವರಿಗೂ ಸಹಾ ಸದರಿ ಸ್ವತ್ತಿನ ಖಾತೆಯು ಎಂ.ಆರ್. 3/98-99 ರಂತೆ ಆಗಿರುತ್ತದೆ ಎಂದರೆ ಸಾಕ್ಷಿಯು ಆಗಿರಬಹುದು ಎಂದು ಉತ್ತರಿಸುತ್ತಾರೆ. ಸ.ನಂ. 158/3 ರಲ್ಲಿ 29 ಗುಂಟೆ ಖಾತೆಯ ಪಹಣಿಯು ದೇವಿರಮ್ಮನ ಹೆಸರಿನಲ್ಲಿ ಬರುತ್ತಿದೆ ಎಂದರೆ ನಾನು ನೋಡಿರುವುದಿಲ್ಲ. ನನ್ನ ತಂದೆಯವರ ಹೆಸರಿಗೆ ನಿಪಿ 36 ರ ದಾಖಲೆಯಂತೆ ಸ್ವತ್ತಿನ ಖಾತೆಗಳಾಗಿರುತ್ತದೆ ಎಂದರೆ ನನಗೆ

ಗೊತ್ತಿಲ್ಲ. ಎಂ.ಆರ್. 3/98-99 ರ ಆಧಾರದಂತೆ ನನ್ನ ತಂದೆಯವರ ಹೆಸರಿಗೆ ಖಾತೆ ಬಂದಿತ್ತು ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ಮೊದಲಿನಿಂದಲೂ ನನ್ನ ತಂದೆ ಹೆಸರಿನಲ್ಲಿ ಖಾತೆ ಬರುತ್ತಿತ್ತು ಎಂದು ಉತ್ತರಿಸುತ್ತಾರೆ. ನಿಪಿ 36 ರ ದಾಖಲೆಲ್ಲಿ ನಮೂದಿಸಿರುವ ಎಲ್ಲಾ ಸರ್ವೆ ನಂಬರ್‌ಗಳ ಖಾತೆಯು ನನ್ನ ತಂದೆ ಹೆಸರಿನಲ್ಲಿ ಬರುತ್ತಿತ್ತು. ಆ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಎಂ.ಆರ್. 3/98-99 ರಂತೆ 106/16 ರಲ್ಲಿ 1 ಎಕರೆ , 106/17 ರಲ್ಲಿ 17 ಗುಂಟೆ, 106/12 ಬಿ ನಲ್ಲಿ 3 ಗುಂಟೆ, 112/3 ರಲ್ಲಿ 3 ಎಕರೆ ಸ್ವತ್ತಿನ ಖಾತೆಗಳು ಕೆ.ಸಿ. ಮೋಹನ್ ರವರಿಗೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಎಂ.ಆರ್. 3/98-99 ರ ಆದೇಶವನ್ನು ನಾವೆಲ್ಲೂ ಸಹಾ ಪ್ರಶ್ನೆ ಮಾಡಿರುವುದಿಲ್ಲ.

ನಮ್ಮ ಮನೆಯಲ್ಲಿ ನಮ್ಮ ತಾತ ಮೃತಪಟ್ಟ ನಂತರ ಆಸ್ತಿಯನ್ನು ಖರೀದಿ ಮಾಡುವುದು ಹಾಗೂ ಆಸ್ತಿಗಳಿಗೆ ಸಂಬಂಧಿಸಿದಂತೆ ವ್ಯವಹರಣೆಯನ್ನು ನನ್ನ ತಂದೆಯವರೇ ಮಾಡುತ್ತಿದ್ದರು ಎಂದರೆ ಹೌದು. ನನ್ನ ತಂದೆಯವರಿಗೆ ಒಳಿತು ಹಾಗೂ ಕೆಡಕಿನ ಬಗ್ಗೆ ಮಾಹಿತಿ ಇತ್ತು ಎಂದರೆ ಹೌದು. ನನ್ನ ತಂದೆಯವರು ಎಸ್.ಎಸ್.ಎಲ್.ಸಿ.ವರೆಗೂ ವಿದ್ಯಾಭ್ಯಾಸ ಮಾಡಿದ್ದರು. ನನ್ನ ತಂದೆಯವರು ಅವರ ಸಹಿಯನ್ನು ಇಂಗ್ಲೀಷ್ ಹಾಗೂ ಕನ್ನಡ ಬಾಷೆಯಲ್ಲಿ ಮಾಡುತ್ತಿದ್ದರು. ಲತಾಮಣಿ ರವರು 7 ನೇ ತರಗತಿವರೆಗೆ ಓದಿರುತ್ತಾರೆ. ಅವರು ಎಡಗೈ ಹೆಬ್ಬೆಟ್ಟಿನ ಗುರುತು ಹಾಕುತ್ತಿದ್ದರು. ದೇವಿರಮ್ಮ ಸಹಾ ಎಡಗೈ ಹೆಬ್ಬೆಟ್ಟಿನ ಗುರುತು ಹಾಕುತ್ತಿದ್ದರು. ನನ್ನ ತಂದೆಯವರು ಯಾವುದೇ ದಾಖಲೆಗೆ ಸಹಿ ಮಾಡಬೇಕಾದರೆ ಓದಿ ತಿಳಿದುಕೊಂಡು ಸಹಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯವರ ಸಹಿಯನ್ನು ನಾನು ಗುರುತಿಸಬಲ್ಲೆ.

ನಾನು ಹಾಗೂ ನಮ್ಮ ತಾಯಿಯು ಇದೇ ನ್ಯಾಯಾಲಯದಲ್ಲಿ ಓ.ಎಸ್. 23/2016 ರಂತೆ ಪ್ರಕರಣವನ್ನು ದಾಖಲು ಮಾಡಿರುತ್ತೇವೆ ಎಂದರೆ ಹೌದು. ಸದರಿ ಪ್ರಕರಣದಲ್ಲಿ ನಾನು ಎಲ್ಲರ ಪರವಾಗಿ ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಹೌದು. ಸದರಿ ಪ್ರಕರಣದಲ್ಲಿ ನಾನು ಪಾಟೀಸವಾಲಿಗೆ ಒಳಪಟ್ಟಿರುತ್ತೇನೆ ಎಂದರೆ ಹೌದು. ಈ ಹಂತದಲ್ಲಿ ಸಾಕ್ಷಿಗೆ ಓ.ಎಸ್. 23/2016 ರ ಪ್ರಕರಣದಲ್ಲಿನ ಮುಖ್ಯವಿಚಾರಣಾ ಪ್ರಮಾಣ ಪತ್ರದ ಧೃಢೀಕೃತ ನಕಲು ಹಾಗೂ ಸಾಕ್ಷಿಯ ಪಾಟೀಸವಾಲಿನ ಧೃಢೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿಯು ಒಪ್ಪಿರುವ ಕಾರಣ ನಿ.ಪಿ. 104, 105 ಎಂದು ಗುರುತಿಸಲಾಯಿತು. ನಾನು ಸದರಿ ಪ್ರಕರಣದಲ್ಲಿ ನಿ.ಪಿ. 91 ರಲ್ಲಿನ ಸಹಿ ನಮ್ಮ ತಂದೆಯವರದ್ದು ಎಂದುಒಪ್ಪಿ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಹೌದು. ನಿ.ಪಿ. 36 ರ ಎಂ.ಆರ್. 3/98-99 ರಲ್ಲಿ ನಮೂದಿಸಿರುವಂತಹ ಸ್ವತ್ತಿನ ಖಾತೆಗಳು ನನ್ನ ತಂದೆ ಮೃತಪಟ್ಟ ನಂತರ ನನ್ನ ಹೆಸರಿಗೆ, ನನ್ನ ಅಣ್ಣ ಶಿವಕುಮಾರ್ ರವರ ಹೆಸರಿಗೆ ಹಾಗೂ ನನ್ನ ತಾಯಿ ಸುಂದ್ರಮ್ಮ ರವರ ಹೆಸರಿಗೆ ಖಾತೆಗಳಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಬದುಕಿದ್ದಾಗಲೇ ಕೆಲವು ಸ್ವತ್ತಿನ ಖಾತೆಗಳು ನನ್ನ ಅಣ್ಣ ಶಿವಕುಮಾರ್ ಹೆಸರಿಗೆ ಬದಲಾಗಿದ್ದು, ನನ್ನ ತಂದೆ ಮೃತಪಟ್ಟ ನಂತರ ನನ್ನ ತಾಯಿ ಹೆಸರಿಗೆ ಬಂದಿರುವುದಾಗಿ ಉತ್ತರಿಸುತ್ತಾರೆ. ನನ್ನ ತಂದೆ ಜೀವಂತವಿದ್ದಾಗ ನನ್ನ ಅಣ್ಣ ಶಿವಕುಮಾರ್ ನ ಹೆಸರಿಗೆ 6-7 ಸ್ವತ್ತಿನ ಖಾತೆ ಬಂದಿರುತ್ತದೆ. ಎಂ.ಆರ್. 3/98-99 ರಲ್ಲಿ ನಮೂದಿಸಿರುವ ಆಸ್ತಿಗಳು ನನ್ನ ತಂದೆ ಮೃತಪಟ್ಟ ನಂತರ ಶಿವಕುಮಾರ್ ನಿಗೆ ಖಾತೆಯಾದಂತಹ ಆಸ್ತಿಗಳನ್ನು ಹೊರತುಪಡಿಸಿ ನನ್ನ ತಾಯಿ ಹೆಸರಿಗೆ ಖಾತೆ ಬದಲಾವಣೆ ಆಯಿತು ಎಂದರೆ ಹೌದು. ಈಗಲೂ ಸಹಾ ಸ್ವತ್ತಿನ ಖಾತೆ ನನ್ನ ತಾಯಿ ಹೆಸರಿನಲ್ಲಿ ಇರುತ್ತದೆ. ದಿನಾಂಕ : 20.01.1998 ರಂದು ನನ್ನ ತಂದೆ,

ನನ್ನ ಚಿಕ್ಕಪ್ಪ ಮೋಹನ, ನನ್ನ ಅಕ್ಕ ಲತಾಮಣಿ, ನನ್ನ ಅತ್ತೆ ದೇವಿರಮ್ಮನವರ ನಡುವೆ ವಿಭಾಗ ಪತ್ರವಾಗಿದೆ ಎಂದರೆ ನನಗೆ ಗೊತ್ತಿಲ್ಲ . ಓ.ಎಸ್. 23/2016 ರಲ್ಲಿ ನಾನು ವಿಭಾಗವಾಗಿರುತ್ತದೆ ಎಂದು ಒಪ್ಪಿರುತ್ತೇನೆ ಎಂದರೆ ಸಾಕ್ಷಿಯು ನನಗೆ ಆ ಸಂಧರ್ಭದಲ್ಲಿ ಹುಷಾರಿಲ್ಲದೇ ಇದ್ದ ಕಾರಣ ನಾನು ರೀತಿಯಲ್ಲಿ ಸಾಕ್ಷ್ಯ ನುಡಿದಿರಬಹುದು ಎಂದು ಉತ್ತರಿಸುತ್ತಾರೆ. ಸದರಿ ಪ್ರಕರಣದಲ್ಲಿ ಎಂ.ಆರ್. 3/98-99 ರಲ್ಲಿನ ಆಸ್ತಿಗಳು ಹಾಗೂ ಕಲ್ಲಹಳ್ಳಿ ಗ್ರಾಮದ ಮಂಗಳೂರು ಹೆಂಚಿನ ಮನೆ , ಒಂದು ಆರ್.ಸಿ.ಸಿ. ಮನೆ, ಹಾಗೂ ಒಂದು ಬ್ಯಾರೆಲ್ ಹೌಸ್ ನನ್ನ ತಂದೆ ಹಿಸ್ಸೆಗೆ ಬಂದಿರುವುದಾಗಿ ಒಪ್ಪಿರುತ್ತೇನೆ ಎಂದರೆ ಸಾಕ್ಷಿಯು ಹುಷಾರಿಲ್ಲದ ಕಾರಣ ಒಪ್ಪಿರಬಹುದು ಎಂದು ಉತ್ತರಿಸುತ್ತಾರೆ.

ಸ.ನಂ. 102/3 ರಲ್ಲಿ 1 ಎಕರೆ 4 ಗುಂಟೆ, 105/4 ರಲ್ಲಿ 15 ಗುಂಟೆ, 105/5 ರಲ್ಲಿ 10 ಗುಂಟೆ, 105/7 ಎ ರಲ್ಲಿ 15 ಗುಂಟೆ, 105/9 ರಲ್ಲಿ 14 ಗುಂಟೆ, 105/10 ರಲ್ಲಿ 20 ಗುಂಟೆ, 105/12 ರಲ್ಲಿ 8 ಗುಂಟೆ, 105/16 ರಲ್ಲಿ 14 ಗುಂಟೆ, 106/1 ರಲ್ಲಿ 17 ಗುಂಟೆ, 106/5 ರಲ್ಲಿ 15 ಗುಂಟೆ, 106/16 ರಲ್ಲಿ 4 ಗುಂಟೆ, ನನ್ನ ತಂದೆ ಜೀವಂತ ಇದ್ದಾಗ ಎಂ.ಆರ್. 3/98-99 ರಂತೆ ನನ್ನ ತಂದೆಯವರ ಹೆಸರಿಗೆ ಬಂದು ನನ್ನ ಅಣ್ಣ ಶಿವಕುಮಾರ್ ರವರಿಗೆ ಖಾತೆಯಾಗಿರುತ್ತದೆ ಎಂದರೆ ಹೌದು. ಸದರಿ ಸ್ವತ್ತುಗಳು ನನಗೆ ಹಾಗೂ ನನ್ನ ಅಣ್ಣನಿಗೆ ಎಂ.ಆರ್. 25/08-09 ರಂತೆ ಖಾತೆಯಾಗಿರುತ್ತದೆ ಎಂದರೆ ಹೌದು. ಸಾಕ್ಷಿ ಮುಂದುವರೆದು ನ್ಯಾಯಾಲಯದ ಆದೇಶದಂತೆ ಖಾತೆಯಾಗಿರುವುದಾಗಿ ಉತ್ತರಿಸುತ್ತಾರೆ. ಸದರಿ ಸ್ವತ್ತುಗಳನ್ನು ನಾನು ನನ್ನ ಅಣ್ಣ ವಿಭಾಗ ಮಾಡಿಕೊಂಡಿರುತ್ತೇವೆ. ವಿಭಾಗ ಪತ್ರವು

ನೋಂದಣಿಯಾಗಿದೆ ಎಂದರೆ ಹೌದು. ಸದರಿ ವಿಭಾಗ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ತಂದೆ ಹಿಸ್ಸೆಗೆ ಬಂದಂತಹ ಸ್ವತ್ತುಗಳನ್ನು ನಾನು, ನನ್ನ ಅಣ್ಣ ಶಿವಕುಮಾರ ಹಾಗೂ ನನ್ನ ತಾಯಿ ಒಟ್ಟಿಗೆ ಅನುಭವ ಮಾಡಿಕೊಂಡು ಬರುತ್ತಿದ್ದೇವೆ ಎಂದರೆ ಹೌದು. ಸ.ನಂ. 106/17 ಮುಟೇಷನ್ ಆಗಿದ್ದು ಮೋಹನ್ ರವರ ಹೆಸರಿಗೆ ಖಾತೆ ಬಂದಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಸ.ನಂ. 106/16 ರಲ್ಲಿ 1 ಎಕರೆ , 106/12 ಬಿ ರಲ್ಲಿ 3 ಗುಂಟೆ, 112/3 ರಲ್ಲಿ 3 ಎಕರೆ ಸ್ವತ್ತಿನ ಖಾತೆಗಳು ಮೋಹನ್ ರವರ ಹೆಸರಿಗೆ ಬರುತ್ತಿದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸ.ನಂ. 112/3 ದುರಸ್ತ್ ಆಗಿ 112/7 ಎಂದು ಆಗಿದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸ.ನಂ. 112/3 ರಲ್ಲಿ ಮೂಲತಹ 4 ಎಕರೆ 6 ಗುಂಟೆ ಸ್ವತ್ತು ಇತ್ತು ಎಂದರೆ ಹೌದು. 112/3 ರಲ್ಲಿ 1 ಎಕರೆ 6 ಗುಂಟೆ ಸ್ವತ್ತಿನ ಖಾತೆ ಹಾಲಿ ದರ್ಶನ್ ರವರ ಹೆಸರಿನಲ್ಲಿದೆ ಎಂದರೆ ಹೌದು. ಉಳಿಕೆ 3 ಎಕರೆ ಸ್ವತ್ತು 112/7 ಎಂದು ನಮೂದಾಗಿದೆ ಎಂದರೆ ಇರಬಹುದು.

ದಾವಾ ಎ ಅನುಸೂಚಿ ಸ್ವತ್ತಿನ 34 ರ ಖಾತೆಯು ನನ್ನ ಅಕ್ಕನ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರಿನಲ್ಲಿ ಇರುವುದಾಗಿ ಉತ್ತರಿಸುತ್ತಾರೆ. ಹಿಸ್ಸೆ ಮೂಲಕ ನನ್ನ ಅಕ್ಕನಿಗೆ ಸ್ವತ್ತನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಅಕ್ಕನ ಮಗ ಸದರಿ ಮನೆಯಲ್ಲಿ ಇರುವುದಾಗಿ ಉತ್ತರಿಸುತ್ತಾರೆ. ಸದರಿ ಸ್ವತ್ತಿನ ಖಾತೆಯು ಲತಾಮಣಿ ರವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ಕೆ.ಸಿ. ಮೋಹನ್ ರವರಿಗೆ ಮಕ್ಕಳಿಲ್ಲ ಎಂದರೆ ಹೌದು. ಸದರಿ ಕೆ.ಸಿ. ಮೋಹನ್ ರವರು ಸತೀಶ್ ರವರಿಗೆ 3 ಎಕರೆ ಸ್ವತ್ತು ಹಾಗೂ ಮನೆಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಹೌದು. ಸ.ನಂ. 106/17 ರಲ್ಲಿ

ಕೊಳವೆ ಬಾವಿ ಇದೆ ಎಂದರೆ ಹೌದು. ಕೊಳವೆ ಬಾವಿಗೆ ಸಂಬಂಧಿಸಿದಂತೆ ನಾನು ಓ.ಎಸ್. 270/2016 ರಂತೆ ಪ್ರಕಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಹೌದು.

ಈ ಹಂತದಲ್ಲಿ ಮಂದುವರೆದ ಪಾಟೀಸವಾಲಿಗೆ ಸಾಕ್ಷಿಯು ಕಾಲವಕಾಶ ಕೋರಿದ ಕಾರಣ ಕಾಲವಕಾಶವನ್ನು ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

(ಅಮರ್ ವಿ.ಎಲ್.)
ಸೀನಿಯರ್ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ ಹೊಳೆನರಸೀಪುರ